# ಶ್ರೀರಾಮನಾಮಾವಲಿಃ



ಶ್ರೀಭಾರತೀಪ್ರಕಾಶನ

# ಪ್ರಸ್ತಾವನೆ

**ಕಲ್ಯಾಣೋಲ್ಲಾಸಸೀಮಾ ಕಲಯತು ಕುಶಲಂ ಕಾಲಮೇಘಾಭಿರಾಮಾ**

**ಕಾಚಿತ್ಸಾಕೇತಧಾಮಾ ಭವಗಹನಗತಿಕ್ಲಾಂತಿಹಾರಿಪ್ರಣಾಮಾ ।**

**ಸೌಂದರ್ಯಹ್ರೀಣಕಾಮಾ ಧೃತಜನಕಸುತಾಸಾದರಾಪಾಂಗದಾಮಾ**

**ದಿಕ್ಷು ಪ್ರಖ್ಯಾತಭೂಮಾ ದಿವಿಷದಭಿನುತಾ ದೇವತಾ ರಾಮನಾಮಾ ॥**

**– ವಿಶ್ವಗುಣಾದರ್ಶ**

**ತಾತ್ಪರ್ಯ :** ಅಯೋಧ್ಯಾನಗರದಲ್ಲಿರುವ ಶ್ರೀರಾಮನೆಂಬ ಹೆಸರಿನ ದೇವತೆಯು ನಮ್ಮೆಲ್ಲರಿಗೂ ಮಂಗಳವನ್ನುಂಟುಮಾಡಲಿ. ಈ ಶ್ರೀರಾಮನು ಕಪ್ಪು ಮೋಡದಂತೆ ಕೃಷ್ಣವರ್ಣದಿಂದ ಸುಂದರನಾಗಿದ್ದಾನೆ. ಈತನನ್ನು ನಮಸ್ಕರಿಸಿದರೆ ಸಂಸಾರದ ಎಲ್ಲ ಕಷ್ಟಗಳೂ ಹೋಗಿಬಿಡುತ್ತವೆ. ಈತನು ಮನ್ಮಥನಿಗಿಂತ ಸುಂದರನಾದವನು. ಪಾರ್ಶ್ವದಲ್ಲಿರುವ ಜನಕಸುತೆಯಾದ ಸೀತೆಯು ಓರೆಗಣ್ಣಿನಿಂದ ಈತನ ಸೌಂದರ್ಯವನ್ನು ನೋಡುತ್ತಿರುತ್ತಾಳೆ. ಶ್ರೀರಾಮನ ಮಹತ್ತ್ವವು ದಿಕ್ಕು ದಿಕ್ಕುಗಳಲ್ಲಿ ಹರಡಿದೆ. ದೇವತೆಗಳೂ ಸಹ ಶ್ರೀರಾಮನನ್ನು ಭಕ್ತಿಯಿಂದ ಸ್ತುತಿಸುತ್ತಾರೆ. ಇಂತಹ ದೇವೋತ್ತಮನಾದ ಶ್ರೀರಾಮನು ನಮಗೆ ಶ್ರೇಯಸ್ಸನ್ನುಂಟುಮಾಡಲಿ.

ಶ್ರೀಮನ್ನಾರಾಯಣನ ದಶಾವತಾರಗಳಲ್ಲಿ ಶ್ರೀರಾಮಾವತಾರವು ಶ್ರೇಷ್ಠವಾದುದು. ಮಾನವನು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಿರಬೇಕು ಎಂಬುದನ್ನು ಶ್ರೀರಾಮನು ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾನೆ. ಹೀಗೆ ತಿಳಿಸಿರುವುದು ಕೆಲವು ಕಡೆ ಹೇಳಿಕೆಯಿಂದ, ಕೆಲವು ಕಡೆ ತನ್ನ ಆಚರಣೆಯಿಂದ. ಶ್ರೀಕೃಷ್ಣನಾದರೋ ತನ್ನ ಉಪದೇಶದಿಂದ ಧರ್ಮವನ್ನೂ ಪರಮಾರ್ಥವನ್ನೂ ತಿಳಿಸಿಕೊಟ್ಟಿದ್ದಾನೆ. ಆಚರಣೆ – ಉಪದೇಶಗಳಲ್ಲಿ ಆಚರಣೆಯೇ ಹೆಚ್ಚು ಪ್ರಭಾವಶಾಲಿ ಎಂದು ಗೊತ್ತಾಗುತ್ತದೆ.

ಶ್ರೀಮದ್ರಾಮಾಯಣದ ಆರಂಭದಲ್ಲಿಯೇ ವಾಲ್ಮೀಕಿಮುನಿಗಳು ನಾರದ ಮಹರ್ಷಿಗಳನ್ನು ಕುರಿತು ಒಂದು ಪ್ರಶ್ನೆಯನ್ನು ಹಾಕುತ್ತಾರೆ. "ನಾರದ ಮುನಿಗಳೇ, ಈ ಸದ್ಗುಣಗಳು ಲೋಕದಲ್ಲಿ ಯಾರಲ್ಲುಂಟು? ತ್ರಿಲೋಕಸಂಚಾರಿಗಳಾದ ನೀವು ಹೇಳಬೇಕು" ಎಂದು ನುಡಿದು ಹದಿನಾರು ಸದ್ಗುಣಗಳನ್ನು ಪಟ್ಟಿ ಮಾಡಿ ಹೇಳುತ್ತಾರೆ. "ಧರ್ಮನಿಷ್ಠೆ, ಕೃತಜ್ಞತೆ, ಕಾರುಣ್ಯ, ಜನೋಪಕಾರ, ಇತ್ಯಾದಿ ಹದಿನಾರು ಗುಣಗಳ

ಪಟ್ಟಿಯಿದು. ಅಲ್ಲದೆ ಆತನು ಮಹಾಪರಾಕ್ರಮಿಯೂ ಆಗಿರಬೇಕು"! ಎಂದು. ಆಗ ನಾರದರು "ವಾಲ್ಮೀಕಿ ಮುನಿಗಳೇ, ನೀವು ಬಹಳ ಸದ್ಗುಣಗಳ ಪಟ್ಟಿಯನ್ನೇ ಮಾಡಿದ್ದೀರಿ. ಇಷ್ಟು ಗುಣಗಳುಳ್ಳ ಒಬ್ಬ ಮನುಷ್ಯನು ದೊರಕುವುದು ಕಷ್ಟ. ಆದರೂ ಆಲೋಚಿಸಿ ಹೇಳುವುದಾದರೆ ದಶರಥರಾಜನ ಮಗನಾದ ಶ್ರೀರಾಮನೊಬ್ಬ ಇಂತಹ ಗುಣಗಳುಳ್ಳವನಾಗಿದ್ದಾನೆ" ಎಂದು ಹೇಳುತ್ತಾರೆ. ಈ ಗುಣಗಳೆಲ್ಲವೂ ಶ್ರೀರಾಮನಲ್ಲಿ ಇವೆಯೆಂಬುದನ್ನು ತೋರಿಸುವುದಕ್ಕಾಗಿ ಶ್ರೀಮದ್ರಾಮಾಯಣವನ್ನೇ ವಾಲ್ಮೀಕಿಮುನಿಗಳು ರಚಿಸಿದರು.

ಶ್ರೀರಾಮನ ಕೆಲವು ನಡತೆಗಳನ್ನು ವೀಕ್ಷಿಸಬಹುದು : ಈತನು ತನ್ನ ತಾಯಿ ತಂದೆಯರಿಗೆ ಅತ್ಯಂತ ವಿಧೇಯನಾಗಿ ನಡೆದುಕೊಳ್ಳುತ್ತಾನೆ. ಕೈಕೇಯಿಯು ತನ್ನ ಮಲತಾಯಿಯಾದರೂ ಸಾಕ್ಷಾತ್ ತಾಯಿಯೆಂಬ ಭಾವನೆಯಿಂದಲೇ ವರ್ತಿಸುತ್ತಾನೆ. ಸಾಕ್ಷಾತ್ ತಾಯಿಯಾದ ಕೌಸಲ್ಯೆಗೂ ಕೈಕೇಯಿಗೂ ಆತನ ದೃಷ್ಟಿಯಲ್ಲಿ ಭೇದವೇ ಇಲ್ಲ. ತನ್ನ ವನವಾಸಕ್ಕೆ, ನಾನಾ ಬಗೆಯ ಕಷ್ಟಗಳಿಗೆ ಕೈಕೇಯಿಯು ಕಾರಣಳಾಗಿದ್ದರೂ ಅವಳನ್ನು ದೂಷಿಸುವುದಿಲ್ಲ. ಅವಳು ತಂದೆಯ ಪತ್ನಿಯಾದ್ದರಿಂದ ಪೂಜ್ಯಳೆಂದೇ ಅವನ ಭಾವನೆ. ತನ್ನ ವನವಾಸದ ವರವನ್ನು ಅವಳು ದಶರಥನಿಂದ ಕೇಳಿಕೊಳ್ಳುವುದಕ್ಕೆ ಮೊದಲು ಆತನು ಅವಳಲ್ಲಿ ತಾಯಿಯಂತೆಯೇ ನಡೆದುಕೊಂಡಿದ್ದಾನೆ. ಇಷ್ಟು ಮಾತೃಭಕ್ತಿಯಿಂದ ನಡೆದುಕೊಂಡರೂ ತನ್ನನ್ನು ಕಾಡಿಗೆ ದೂಡುತ್ತಾಳೆಂಬ ಚಿಂತೆಯು ಲೇಶವಾಗಿಯೂ ಅವನ ಮನಸ್ಸಿನಲ್ಲಿ ಮೂಡುವುದಿಲ್ಲ. ಇನ್ನು ದಶರಥನಲ್ಲಿ ಸಹ ಆತನ ಭಕ್ತಿ ಗೌರವಗಳು ಒಂದೇ ವಿಧವಾಗಿದ್ದವೇ ಹೊರತು ಕಡೆಯವರೆಗೂ ಬದಲಾಗಲಿಲ್ಲ. ಭರತನು ಕಾಡಿಗೆ ಬಂದು ದಶರಥನ ಸಾವನ್ನು ಹೇಳಿದಾಗ ಶ್ರೀರಾಮನ ದುಃಖಕ್ಕೆ ಮೇರೆಯೇ ಇರುವುದಿಲ್ಲ. ಅವನು ಸೀತಾಲಕ್ಷ್ಮಣರಿಗೆ ತಂದೆಯ ಸಾವನ್ನು ಹೇಳಿ ಅಳುತ್ತಲೇ ದಶರಥನ ಉತ್ತರಕ್ರಿಯೆಯನ್ನು ಕಾಡಿನಲ್ಲಿ ಮಾಡುತ್ತಾನೆ. ದಶರಥನನ್ನು ಹೊಗಳಿ ಹೊಗಳಿ ವಿಲಪಿಸುತ್ತಾನೆ. ತಮ್ಮನಾದ ಲಕ್ಷ್ಮಣನ ವಿಷಯದಲ್ಲಿ ಆತನ ಪ್ರೀತಿಕಾರುಣ್ಯಗಳು ಅತಿಶಯವಾದವು. ಇಂದ್ರಜಿತುವಿನ ಅಸ್ತ್ರದಿಂದ ಲಕ್ಷ್ಮಣನು ಮೂರ್ಛೆಹೋದಾಗ ಆತನನ್ನು ತಬ್ಬಿಕೊಂಡು ಶ್ರೀರಾಮನು ಗೋಳಾಡುವುದು ನಮಗೂ ದುಃಖವನ್ನು ತರಿಸುತ್ತದೆ. ಮಡದಿಯಾದ ಸೀತೆಯ ವಿಷಯದಲ್ಲಿ ಆತನಿಗಿದ್ದ ಪ್ರೀತಿ ಅತಿಶಯವಾದುದು. ಅವಳು ಶ್ರೀರಾಮನೊಡನೆ ಕಾಡಿಗೆ ಬರುತ್ತೇನೆಂದು ಹಠ ಹಿಡಿಯುತ್ತಾಳೆ. ಆಗ ರಾಘವನು ಅವಳನ್ನು ಸಮಾಧಾನಪಡಿಸಿ ಅಯೋಧ್ಯೆಯಲ್ಲಿಯೇ ಉಳಿಯುವಂತೆ ಮತ್ತೆ ಮತ್ತೆ ಹೇಳಿ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಕಡೆಗೆ ಸೀತೆಯು

ಗೋಳೋ ಎನ್ನುತ್ತ ಪತಿಯನ್ನು ಅಪ್ಪಿಕೊಂಡು ಅಳುತ್ತಾ ತಾನೂ ಅಡವಿಗೆ ಬರುತ್ತೇನೆಂದು ಹಠ ಹಿಡಿದಾಗ ಮಾರ್ಗಾಂತರವಿಲ್ಲದೆ ಒಪ್ಪಿಕೊಳ್ಳುತ್ತಾನೆ. ಕಾಡಿನಲ್ಲಿದ್ದಾಗ ಅವಳಿಗೆ ಕಷ್ಟವಾಗದಂತೆ ಬಹುವಿಧದಲ್ಲಿ ನೋಡಿಕೊಳ್ಳುತ್ತಾನೆ. ರಾವಣನು ಮಾರೀಚನ ಮೂಲಕ ಸೀತೆಯನ್ನು ಅಪಹರಿಸಿಕೊಂಡು ಲಂಕೆಗೆ ಹೋದಾಗ ಶ್ರೀರಾಮನು ಅವಳಿಗಾಗಿ ಹುಚ್ಚನಂತೆ ಮಾತಾಡುತ್ತಾ ಕಾಡಿನಲ್ಲಿ ಅಲೆಯುತ್ತಾನೆ. ಸೀತೆಗಾಗಿ ಅವನು ಹಲುಬುವುದು ಓದುಗರಿಗೂ ಅಳುವನ್ನು ತರಿಸುತ್ತದೆ. ಲಕ್ಷ್ಮಣನು ಹೇಳುವ ಸಮಾಧಾನವು ಅವನಿಗೆ ನಾಟುವುದೇ ಇಲ್ಲ. ಪತ್ನಿಗಾಗಿ ಅವನಿಗಾದಂತಹ ತೀವ್ರವಾದ ದುಃಖ ಸಂವೇದನೆಗಳು ನಮ್ಮ ಇತಿಹಾಸ, ಪುರಾಣ, ಕಾವ್ಯಗಳಲ್ಲಿ ಇನ್ನೆಲ್ಲಿಯೂ ಲಭಿಸುವುದಿಲ್ಲ. ಅವಳನ್ನು ಹುಡುಕುತ್ತಾ ಸಮುದ್ರದ ಸಮೀಪಕ್ಕೆ ಬಂದಾಗ ಲಕ್ಷ್ಮಣನೊಡನೆ – 'ಲಕ್ಷ್ಮಣ ! ಸೀತೆಯು ದೊರಕಲಿಲ್ಲ. ನಾನು ಈ ವಿರಹ ದುಃಖವನ್ನು ತಡೆಯಲಾರೆ. ಆದ್ದರಿಂದ ನಿನ್ನನ್ನು ಬಿಟ್ಟು ಈ ಸಮುದ್ರದಲ್ಲಿ ಮುಳುಗಿ ಬಿಡುತ್ತೇನೆ' ಎನ್ನುತ್ತಾನೆ. ಈ ಪರಿಯಲ್ಲಿ ಶೋಕತಪ್ತನಾದ ಶ್ರೀರಾಮನ ಗೋಳಾಟವು ನಮ್ಮ ಹೃದಯವನ್ನೇ ಕಲಕಿಬಿಡುತ್ತದೆ.

ಹನುಮಂತನು ಶ್ರೀರಾಮನ **ಅಂತರಂಗಭಕ್ತ** ಎಂಬುದು ಪ್ರಸಿದ್ಧವಾದುದು. ಅರಣ್ಯದಲ್ಲಿ ಋಷ್ಯಮೂಕಪರ್ವತದ ಎಡೆಯಲ್ಲಿ ಹನುಮಂತನಿಗೆ ರಾಮಲಕ್ಷ್ಮಣರ ಭೇಟಿಯಾಗುತ್ತದೆ. ಇವರು ಯಾರೆಂದು ತಿಳಿದುಬರುವುದಕ್ಕಾಗಿ ಸುಗ್ರೀವನು ಹನುಮಂತನನ್ನು ಅವರ ಬಳಿಗೆ ಕಳುಹಿಸುತ್ತಾನೆ. ಹನುಮಂತನು ಒಬ್ಬ ವಟುವಿನ ವೇಷದಲ್ಲಿ ಬಂದು ಈ ರಾಮಲಕ್ಷ್ಮಣರನ್ನು ನಯ–ವಿನಯಗಳಿಂದ ನೀವು ಯಾರೆಂದು ವಿಚಾರಿಸಿದಾಗ ಲಕ್ಷ್ಮಣನು ತಮ್ಮ ಸುದ್ದಿಯನ್ನು ಹೇಳುತ್ತಾನೆ. ಆಗ ಹನುಮಂತನು ತಾನು ಯಾರೆಂದು ಬಣ್ಣಿಸುತ್ತಾನೆ. ಆತನ ಮಾತುಗಳನ್ನು ಕೇಳಿ ಶ್ರೀರಾಮನು ಮೆಚ್ಚುಗೆಯಿಂದ ತಲೆದೂಗುತ್ತಾನೆ ಮತ್ತು

**ನೂನಂ ವ್ಯಾಕರಣಂ ಕೃತ್ಸ್ನಮನೇನ ಬಹುಧಾ ಶ್ರುತಮ್**
**ಬಹುವ್ಯಾಹರತಾಽನೇನ ನ ಕಿಂಚಿದಪಶಬ್ದಿತಮ್**

ಎಂದು ಲಕ್ಷ್ಮಣನಿಗೆ ಹೇಳುತ್ತಾನೆ. "ಈತನು ನಿಶ್ಚಯವಾಗಿಯೂ ವ್ಯಾಕರಣಶಾಸ್ತ್ರವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದ್ದಾನೆ. ಇಷ್ಟು ಮಾತಾಡಿದರೂ ಒಂದೇ ಒಂದು ಅಪಶಬ್ದವನ್ನು ನುಡಿಯಲಿಲ್ಲ !" ಎಂದು ನುಡಿದು ಹನುಮಂತನಲ್ಲಿ ತನ್ನ ಮೆಚ್ಚುಗೆಯನ್ನು ಸೂಚಿಸುತ್ತಾನೆ.

ಇದು ರಾಮ – ಹನುಮಂತರ ಮೊದಲ ಭೇಟಿ. ಹನುಮಂತನೂ ಸಹ ಶ್ರೀರಾಮನ ಸೌಂದರ್ಯ, ದೊಡ್ಡತನ, ಗಾಂಭೀರ್ಯ, ಮುಂತಾದ ಗುಣಗಳನ್ನು ನೋಡಿ

ಮೆಚ್ಚಿಕೊಳ್ಳುತ್ತಾನೆ. ಹೀಗೆ ಸಂಭವಿಸಿದ ಮೈತ್ರಿಯು ಚಿರಂತನವಾಗಿ ನಿಂತುಬಿಡುತ್ತದೆ. ಶ್ರೀರಾಮನು ತನ್ನ ಸ್ವಾಮಿಯೆಂದು ತಾನು ಅವನ ಭಕ್ತನಾದ ದಾಸನೆಂದು ಹನುಮಂತನಿಗೆ ದೃಢವಾದ ಭಾವನೆ ಹುಟ್ಟುತ್ತದೆ. ಹನುಮಂತನು ಸೀತಾದೇವಿಯನ್ನು ಹುಡುಕುತ್ತಾ ಲಂಕೆಗೆ ಹೋಗಿ ಅಶೋಕವನವನ್ನು ಧ್ವಂಸಗೊಳಿಸಿದಾಗ **ದಾಸೋಽಹಂ ಕೋಸಲೇಂದ್ರಸ್ಯ** ಎಂದು ಹೇಳಿಕೊಳ್ಳುತ್ತಾನೆ. ಈತನು ಶ್ರೀರಾಮನಿಗೆ ಹೇಗೆ ದಾಸನಾದ? ಆತನ ಮಹಿಮಾನ್ವಿತ ಗುಣಗಳಿಂದಲ್ಲವೇ? ಶ್ರೀರಾಮನ ವ್ಯಕ್ತಿತ್ವವು ಎಂತಹದೆಂಬುದನ್ನು ಎಂತಹ ಭಾವನೆಯನ್ನು ಹುಟ್ಟಿಸುವುದೆಂಬುದನ್ನು ಇದರಿಂದ ಕಾಣಬಹುದು.

ಅನಂತರ ಸೀತಾದೇವಿಯನ್ನು ನೋಡಿ ಮಾತನಾಡಿ ಸಮುದ್ರವನ್ನು ಲಂಘಿಸಿ ಹಿಂದಕ್ಕೆ ಬಂದು ತನ್ನ ಕಾರ್ಯವೆಲ್ಲವನ್ನೂ ಶ್ರೀರಾಮನಿಗೆ ತಿಳಿಸುತ್ತಾನೆ. ಸೀತಾದೇವಿಯು ಲಂಕೆಯಲ್ಲಿದ್ದಾಳೆಂಬುದು ದೃಢವಾಯಿತು. ಆಗ ಶ್ರೀರಾಮನು ಪರಮಸಂತೋಷದಿಂದ "ಇಂತಹ ಮಹಾಕಾರ್ಯವನ್ನು ಹನುಮಂತನಲ್ಲದೆ ಇನ್ನು ಯಾರು ಮಾಡಿಯಾರು? ಬಹಳ ಕಷ್ಟದಲ್ಲಿ ಸಿಕ್ಕಿರುವ ನಾನು ಈ ಮಹಾತ್ಮನಿಗೆ ಯಾವ ಪಾರಿತೋಷಕವನ್ನು ಕೊಡಲಿ? ಈ ಆಲಿಂಗನವನ್ನು ಮಾತ್ರ ಕೊಡಬಲ್ಲೆ" ಎಂದು ಹೇಳಿ ಆನಂದದಿಂದ ಹನುಮಂತನನ್ನು ಗಟ್ಟಿಯಾಗಿ ಅಪ್ಪಿಕೊಳ್ಳುತ್ತಾನೆ. ಹನುಮಂತನಿಗಾದರೋ ಇದಕ್ಕಿಂತ ಹೆಚ್ಚಾದ ಇನ್ನು ಯಾವ ವರ ಬೇಕಾಗಿತ್ತು? ಈ ರೀತಿಯಲ್ಲಿ ಕೃತಜ್ಞತೆಯ ಪಾಠವನ್ನು ಶ್ರೀರಾಮನು ನಮಗೆ ಕಲಿಸಿದ್ದಾನೆ.

ಯುದ್ಧದಲ್ಲಿ ರಾವಣನು ಹತನಾದನು. ಆಗ ರಾವಣನ ಉತ್ತರಕ್ರಿಯೆಯನ್ನು ಯಾರು ಮಾಡಬೇಕು? ಅವನ ಪುತ್ರರಲ್ಲಿ ಅಥವಾ ಬಾಂಧವರಲ್ಲಿ ಸೋದರನಾದ ವಿಭೀಷಣನೊಬ್ಬನೇ ಕೊನೆಗೆ ಉಳಿದವನು. ಶ್ರೀರಾಮನು ವಿಭೀಷಣನನ್ನು ಕರೆದು "ವಿಭೀಷಣ ! ಈತನ ಉತ್ತರಕ್ರಿಯೆಯನ್ನು ಮಾಡು" ಎಂದು ಆದೇಶಿಸುತ್ತಾನೆ. ವಿಭೀಷಣನು ದುಷ್ಟನಾದ ರಾವಣನ ಉತ್ತರಕ್ರಿಯೆಯನ್ನು ಮಾಡಲು ಒಪ್ಪುವುದಿಲ್ಲ. ಆಗ ಶ್ರೀರಾಮನು ಹೇಳುವ ಈ ಮಾತು ಸ್ಮರಣೀಯವಾದುದು –

**ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಮ್**
**ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ**

"ವಿಭೀಷಣ ! ವೈರವೆಂಬುದು ವೈರಿಯು ಸಾಯುವವರೆಗೆ ಮಾತ್ರ. ನಮ್ಮ ಉದ್ದೇಶವು ಪೂರ್ಣವಾಗಿ ಸಿದ್ಧಿಸಿತು. ಈಗ ಈತನಿಗೆ ಉತ್ತರಕ್ರಿಯಾದಿಗಳನ್ನು ಮಾಡು. ನಿನಗೆ ಈತನು ಹೇಗೆ ಸಹೋದರನೋ ಹಾಗೆಯೇ ನನಗೂ ಸಹೋದರ!".

'ವಿಭೀಷಣ ! ನೀನು ರಾವಣನಿಗೆ ಉತ್ತರಕ್ರಿಯೆಗಳನ್ನು ಮಾಡದಿದ್ದರೆ ನಾನು ಮಾಡುತ್ತೇನೆ' ಎಂದು ಅಭಿಪ್ರಾಯ. ಇಂತಹ ಉದಾತ್ತ ಗುಣವು ಶ್ರೀರಾಮನಲ್ಲಲ್ಲದೆ ಇನ್ನೆಲ್ಲಿ ಇದ್ದೀತು?

ರಾಜರು ಶತ್ರುರಾಜರನ್ನು ಜಯಿಸಿದಾಗ ಅವರ ರಾಜ್ಯಗಳನ್ನು ತಮ್ಮ ರಾಜ್ಯದೊಂದಿಗೆ ಸೇರಿಸಿ ಬಿಡುವುದು ಹಿಂದಿನಿಂದ ಬಂದ ಸಂಪ್ರದಾಯವಾಗಿರುತ್ತದೆ. ಆದರೆ ಶ್ರೀರಾಮನ ಘನತೆಯನ್ನು ನೋಡಿ ! ವಾಲಿಯನ್ನು ಅವನು ಸಂಹರಿಸಿದಾಗ ಅವನ ರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳದೇ ಸುಗ್ರೀವನು ರಾಜನೆಂದು ಪಟ್ಟಾಭಿಷೇಕ ಮಾಡಿಸುತ್ತಾನೆ. ರಾವಣನನ್ನು ಕೊಂದಮೇಲೆ ಲಂಕಾದ್ವೀಪವನ್ನು ಕೋಸಲರಾಜ್ಯದೊಂದಿಗೆ ಸೇರಿಸಿಕೊಳ್ಳಬಹುದಾಗಿತ್ತು. ಆದರೆ ಲಂಕೆಯಲ್ಲಿ ವಿಭೀಷಣನಿಗೆ ಪಟ್ಟಾಭಿಷೇಕವನ್ನು ತಾನೇ ಮಾಡಿಸಿ ಹಿಂದಿರುಗುತ್ತಾನೆ. ವಿಭೀಷಣನು ಕೃತಜ್ಞತೆಯಿಂದ ಶ್ರೀರಾಮನಿಗೆ ಯಥೋಚಿತವಾದ ಸತ್ಕಾರವನ್ನು ಮಾಡಲು ಬಯಸುತ್ತಾನೆ. ಆದರೆ ಯಾವ ಸತ್ಕಾರವನ್ನೂ ಸ್ವೀಕರಿಸದೆ "ನಾನು ಮೊದಲು ಭರತನನ್ನು ನೋಡಬೇಕಾಗಿದೆ. ನನಗಾಗಿ ನನ್ನ ತಮ್ಮನು ಬಹಳ ದುಃಖಪಡುತ್ತಿದ್ದಾನೆ" ಎಂದು ಹೇಳಿ ಪುಷ್ಪಕವಿಮಾನವನ್ನೇರಿ ಅಯೋಧ್ಯೆಗೆ ಹೊರಟುಬಿಡುತ್ತಾನೆ. ಇದು ಶ್ರೀರಾಮನ ಘನತೆ.

ಲಂಕೆಯಿಂದ ಪುಷ್ಪಕವಿಮಾನದಲ್ಲಿ ಸೀತೆಯೊಡನೆ ಹಿಂದಿರುಗುವಾಗ ಹನುಮಂತನೂ ಬಂದಿದ್ದನು. ಭರತನು ನಂದಿಗ್ರಾಮದಲ್ಲಿ ಶ್ರೀರಾಮನ ಆಗಮನವನ್ನು ನಿರೀಕ್ಷಿಸುತ್ತಿದ್ದನು. ಆಗ ಆ ವಿಮಾನವನ್ನು ದೂರದಲ್ಲಿ ಕೆಳಗಿಳಿಸಿ ಶ್ರೀರಾಮನು ಹನುಮಂತನಿಗೆ "ಹನುಮಂತ ! ನೀನು ಮುಂದೆ ಹೋಗಿ ಭರತನಿಗೆ ನನ್ನ ಆಗಮನವನ್ನು ತಿಳಿಸು. ಆಗ ಅವನ ಮುಖಭಾವವನ್ನು ವೀಕ್ಷಿಸುತ್ತಿರು. ನನ್ನ ಬರುವಿಕೆಯಿಂದ ಅವನಿಗೆ ಸಂತೋಷವಾಯಿತೇ ಅಥವಾ ವಿಷಾದವಾಯಿತೇ ಎಂಬುದನ್ನು ಭರತನ ಮುಖಭಾವದಿಂದ ತಿಳಿದು ಬಂದು ನನಗೆ ಹೇಳು. ಹದಿನಾಲ್ಕು ವರುಷ ರಾಜ್ಯವನ್ನಾಳಿದಾಗ ಯಾವನಿಗೆ ಅದನ್ನು ಬಿಟ್ಟುಕೊಡಲು ಇಚ್ಛೆಯಾದೀತು? ಭರತನಿಗೆ ನಾನು ಬಂದದ್ದರಿಂದ ಸ್ವಲ್ಪವಾದರೂ ವಿಷಾದವಾಗಿದ್ದರೆ ನನಗೆ ಹೇಳು. ನಾನು ಇಲ್ಲಿಂದಲೇ ಮತ್ತೆ ವನವಾಸಕ್ಕೆ ಹೋಗಿಬಿಡುತ್ತೇನೆ. ಭರತನೇ ಕೋಸಲರಾಜ್ಯವನ್ನು ಆಳಿಕೊಂಡಿರಲಿ" ಎಂದು ಹೇಳುತ್ತಾನೆ. ಶ್ರೀರಾಮನ ಸೂಕ್ಷ್ಮದೃಷ್ಟಿ, ಭ್ರಾತೃವಾತ್ಸಲ್ಯ ಮುಂತಾದ ಸದ್ಗುಣಗಳನ್ನಿಲ್ಲಿ ಕಾಣಬಹುದು. ಯಾರು ಹೀಗೆ ಹೇಳಿಯಾರು? ಈ ಪರಿಯಾದ ಮಹಿಮಾನ್ವಿತ ಸದ್ಗುಣಗಳನ್ನು ಶ್ರೀರಾಮನಲ್ಲಿ ಮಾತ್ರ ಕಾಣಬಹುದು.

ಶ್ರೀರಾಮನ ಒಂದು ವಿಶೇಷವಾದ ಅಪೂರ್ವ ಗುಣವನ್ನಿಲ್ಲಿ ಹೇಳಬೇಕಾಗಿದೆ. ಅದು ಏಕಪತ್ನೀವ್ರತ. ಅವನ ತಂದೆ ದಶರಥನು ಅನೇಕ ಪತ್ನಿಯರನ್ನು ಮದುವೆಯಾಗಿದ್ದುದು

ಗೊತ್ತಿದೆ. ಆದರೆ ಶ್ರೀರಾಮನು ಮಾತ್ರ ಬಾಯಲ್ಲಿ ಹೇಳದಿದ್ದರೂ ನಡತೆಯಲ್ಲಿ ಅದನ್ನು ತೋರಿಸಿಕೊಟ್ಟಿದ್ದಾನೆ. ವನದಲ್ಲಿ ಸೀತಾದೇವಿಯನ್ನು ರಾವಣನು ಅಪಹರಿಸಿದನಷ್ಟೆ. ಅನಂತರ ಅವಳನ್ನು ಹುಡುಕಿ ತರುವುದಕ್ಕಾಗಿ ಅವನು ಪಟ್ಟ ಶ್ರಮವೆಷ್ಟು? ಸಮುದ್ರಕ್ಕೇ ಸೇತುವೆಯನ್ನು ಕಟ್ಟಿ ರಾವಣನನ್ನು ಮರ್ದಿಸಿ ಸೀತಾದೇವಿಯನ್ನು ಕರೆತಂದನು. ಇನ್ನೊಬ್ಬನಾದರೆ ಆ ಮಹಾಕಾರ್ಯಕ್ಕೆ ಕೈ ಹಾಕದೆ ಇನ್ನೊಬ್ಬಳನ್ನು ಮದುವೆಯಾಗುತ್ತಿದ್ದ. ಎರಡನೆಯ ಸಲ ಪ್ರಜೆಗಳು ಸೀತಾದೇವಿಯನ್ನು ಅನುಚಿತವಾಗಿ ದೂಷಿಸಿದರಷ್ಟೆ. ರಾಜಧರ್ಮಕ್ಕೆ ಅಂತಹವಳನ್ನು ಕಟ್ಟಿಕೊಂಡಿರುವುದು ಅಯೋಗ್ಯವೆನಿಸಿ ಶ್ರೀರಾಮನು ಸೀತಾದೇವಿಯನ್ನು ಪರಿತ್ಯಜಿಸಿದನು. ಆದರೆ ಇನ್ನೊಬ್ಬಳನ್ನು ಮದುವೆಯಾಗಲಿಲ್ಲ. ಕಡೆಗೆ ಭೂದೇವಿಯು ಸೀತಾದೇವಿಯನ್ನು ತನ್ನ ಗರ್ಭದಲ್ಲಿ ಸೇರಿಸಿಕೊಂಡಾಗ ಶ್ರೀರಾಮನು ಅತ್ಯಂತ ವಿಷಣ್ಣನಾದನು. ಮಕ್ಕಳಾದ ಲವ-ಕುಶರೊಡನೆ ಅರಮನೆಗೆ ಹೋದನೇ ಹೊರತು ಇನ್ನೊಬ್ಬಳನ್ನು ಮದುವೆಯಾಗಲಿಲ್ಲ. ತಮ್ಮಂದಿರಾದ ಭರತ, ಲಕ್ಷ್ಮಣ, ಶತ್ರುಘ್ನರು ತಮ್ಮ ಪತ್ನಿಯರೊಡನೆ ಪುತ್ರಸಹಿತರಾಗಿ ಇದ್ದರೂ ಆತನು ಮನಸ್ಸು ಬದಲಾಯಿಸಲಿಲ್ಲ. ಮುಂದೆ ಗೃಹಸ್ಥನು ಮಾಡಬೇಕಾದ ಒಂದು ಯಾಗವನ್ನು ಮಾಡಿದನು. ಆಗ ಋಷಿಗಳ ಆದೇಶದಂತೆ ಸುವರ್ಣ ನಿರ್ಮಿತ ಸೀತಾವಿಗ್ರಹವನ್ನು ಬಳಿಯಲ್ಲಿ ಇಟ್ಟುಕೊಂಡನೇ ಹೊರತು ಇನ್ನೊಬ್ಬ ಹುಡುಗಿಯನ್ನು ಕಣ್ಣೆತ್ತಿಯೂ ನೋಡಲಿಲ್ಲ. ಕಡೆಯವರೆಗೂ ಅವನು ಏಕಾಕಿಯಾಗಿ ಜೀವಿಸಿದನೇ ಹೊರತು ಇನ್ನೊಬ್ಬಳನ್ನು ಮದುವೆಯಾಗಲಿಲ್ಲ. ಇದು ಆದರ್ಶವಾದ ಏಕಪತ್ನೀವ್ರತ. ಇಂತಹ ಮಹಾಗುಣಗಳನ್ನು ಇತಿಹಾಸ ಪುರಾಣಗಳಲ್ಲಿ ಬರುವ ಯಾವ ವ್ಯಕ್ತಿಯಲ್ಲಿಯೂ ನಾವು ಕಾಣಲಾರೆವು.

**ರಾಮೋ ರಾಮೋ ರಾಮ ಇತಿ ಪ್ರಜಾನಾಮಭವನ್ ಕಥಾಃ**

**ರಾಮಭೂತಂ ಜಗದಭೂತ್ ರಾಮೇ ರಾಜ್ಯಂ ಪ್ರಶಾಸತಿ**

**ತಾತ್ಪರ್ಯ :** ಶ್ರೀರಾಮನು ರಾಜ್ಯಭಾರವನ್ನು ಮಾಡುತ್ತಿರಲಾಗಿ ಪ್ರಜೆಗಳೆಲ್ಲರೂ ಆತನನ್ನು ಕೊಂಡಾಡುತ್ತಿದ್ದರು. ಎಲ್ಲೆಲ್ಲಿಯೂ ಶ್ರೀರಾಮನ ಹೆಸರೇ ಪ್ರಸ್ತುತವಾಗುತ್ತಿತ್ತು. ಆಹಾ ! ನಮ್ಮ ರಾಜ ಶ್ರೀರಾಮ. ಇವನ ಆಳ್ವಿಕೆಯಲ್ಲಿ ಎಲ್ಲರೂ ಸುಖವಾಗಿದ್ದೇವೆ. ಸುಳ್ಳು, ಕಳ್ಳತನ ಇವೇ ಮೊದಲಾದವುಗಳಿಗೆ ಅವಕಾಶವೇ ಇಲ್ಲ. ನಮಗೆ ಯಾವ ಕೊರತೆಯೂ ಆಗುತ್ತಿಲ್ಲ. ರಾಜ ಎಂದರೆ ಹೀಗಿರಬೇಕು. ರಾಮರಾಜ್ಯ ಇದು ಎಂದು ಹೇಳಿಕೊಂಡು ಸಕಲರೂ ಶ್ರೀರಾಮನನ್ನೂ ಅವನ ಆಳ್ವಿಕೆಯ ವಿಧಾನವನ್ನೂ ಹೊಗಳಿ ಹಾಡುತ್ತಿದ್ದರು. ಆಹಾ ! ರಾಮ ! ರಾಮ ! ರಾಮ ! ಈ ರೀತಿಯಲ್ಲಿ ಜಗತ್ತೆಲ್ಲವೂ ರಾಮಶಬ್ದದಿಂದಲೇ ತುಂಬಿಹೋಯಿತು.

ಶ್ರೀರಾಮನಾಮಸ್ಮರಣೆಯನ್ನು ಮಾಡುತ್ತಾ ಅವನ ಸೇವೆಯಲ್ಲಿಯೇ ನಿರತನಾದ ಹನುಮಂತನು ಧನ್ಯ. ಈತನು ವಾನರವಂಶದಲ್ಲಿ ಜನಿಸಿದವನಾದರೂ

ದೇವತಾಸ್ವರೂಪನಾಗಿ ಭಾರತೀಯರಿಗೆ ಪೂಜ್ಯನಾದವನು. ಭರತಖಂಡದಲ್ಲಿ ರಾಮೇಶ್ವರದಿಂದ ಕಾಶ್ಮೀರದವರೆಗೆ ಹೋದರೆ ಹನುಮಂತನ ದೇವಸ್ಥಾನಗಳು ಹಳ್ಳಿ ಹಳ್ಳಿಗಳಲ್ಲಿಯೂ ದೊರೆಯುತ್ತವೆ. ಆತನ ಭಕ್ತರು ಬಹುಸಂಖ್ಯೆಯಲ್ಲಿದ್ದಾರೆ. ಹನುಮಂತನನ್ನು ದೇವತಾಸ್ವರೂಪನೆಂದು ಪೂಜಿಸುತ್ತಾರೆ. ತಮ್ಮ ಹೆಸರನ್ನೂ ಸಹ ಹನುಮಂತನೆಂದು ಇಟ್ಟುಕೊಳ್ಳುತ್ತಾರೆ. ಹನುಮಂತನಿಲ್ಲದ ಶ್ರೀರಾಮದೇವಸ್ಥಾನವೇ ಇರುವುದಿಲ್ಲ. ಶ್ರೀರಾಮನಾದರೋ ಶ್ರೀಮನ್ನಾರಾಯಣನ ಅವತಾರವೆಂದು ಜನರು ಭಾವಿಸಿದ್ದಾರೆ. ಅವರೇ ವಾನರನಾದ ಹನುಮಂತನನ್ನೂ ಸಹ ದೇವತಾಪಟ್ಟಕ್ಕೆ ಏರಿಸಿದ್ದಾರೆ. ಹನುಮಂತನು ರಾಮನಾಮದ ಮಹಿಮೆಯಿಂದಲೇ ದೇವತಾಸ್ವರೂಪನಾದನು. ಆದ್ದರಿಂದ ಶ್ರೀರಾಮನ ಮಹಿಮೆ ಎಷ್ಟೆಂಬುದು ಗೊತ್ತಾಗುತ್ತದೆ.

ಹೀಗೆಯೇ ಅರಣ್ಯಕಾಂಡದಲ್ಲಿ ಶಬರಿಯೆಂಬ ವೃದ್ಧೆ ಶ್ರೀರಾಮನನ್ನು ಜಪಿಸುತ್ತಾ ಆತನ ಅನುಗ್ರಹದಿಂದ ಸ್ವರ್ಗವನ್ನು ಪಡೆದಳು. **ಜ್ವಲತ್ಪಾವಕಸಂಕಾಶಾ ಸ್ವರ್ಗಮೇವ ಜಗಾಮ ಸಾ.**

ಆದ್ದರಿಂದ ಭಕ್ತಜನರು ಶ್ರೀರಾಮನಾಮವನ್ನು ಜಪಿಸುತ್ತಿರಲಿ, ಶ್ರೀಮದ್ರಾಮಾಯಣವನ್ನು ಓದಿ ಕೃತಾರ್ಥರಾಗಲಿ ಎಂಬ ಸದ್ಭಾವನೆಯಿಂದ **ಶ್ರೀರಾಮಚಂದ್ರಾಪುರಮಠದ ಜಗದ್ಗುರುಪೀಠಾಧ್ಯಕ್ಷರಾದ ಶ್ರೀಶ್ರೀರಾಘವೇಶ್ವರಭಾರತೀ ಮಹಾಸ್ವಾಮಿಗಳವರು** ಈ ಪುಸ್ತಕವನ್ನು ಬರೆಯಿಸಿ ಪ್ರಕಾಶಿಸಿದ್ದಾರೆ. ಭಕ್ತಜನರು ಇದನ್ನು ಪಾರಾಯಣ ಮಾಡಲಿ, ನಾಮಗಳನ್ನು ಜಪಿಸಲಿ, ಇದರಿಂದ ಧನ್ಯರಾಗಲಿ ಎಂಬುದು ಮಹಾಸ್ವಾಮಿಗಳವರ ಇಚ್ಛೆಯಾಗಿರುತ್ತದೆ.

ಮಾನ್ಯರಾದ ವೇದಮೂರ್ತಿ ಶೇಷಗಿರಿ ಗಂಗಾಧರ ಭಟ್ಟ, 'ಸಾಕೇತ' ಗುಂಜಗೋಡು ಮತ್ತು ವಿದ್ವಾನ್ ರಾಮಕೃಷ್ಣ ಭಟ್ಟ, ಕೂಟೇಲು ಇವರೀರ್ವರು ಕಷ್ಟಪಟ್ಟು ಈ ಶ್ರೀರಾಮಸ್ತೋತ್ರಗಳನ್ನು ಮತ್ತು ನಾಮಾವಳಿಗಳನ್ನು ಬೇರೆ ಬೇರೆ ಗ್ರಂಥಗಳಿಂದ ಸಂಗ್ರಹಿಸಿ ಕೊಟ್ಟಿದ್ದಾರೆ. ಇವರೀರ್ವರಿಗೂ ಭಕ್ತಜನರು ಕೃತಜ್ಞರಾಗಿರಬೇಕು.

ವಿಕೃತಿಸಂವತ್ಸರದ ಮಾಘ ಪೂರ್ಣಿಮಾ — **ಮಹಾಮಹೋಪಾಧ್ಯಾಯ**

ಬೆಂಗಳೂರು — **ವಿದ್ವಾನ್ ಎನ್. ರಂಗನಾಥ ಶರ್ಮಾ**

ದಿನಾಂಕ : ೧೮.೦೨.೨೦೧೧

ಶ್ರೀರಾಮಚಂದ್ರನು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಲೋಕಕ್ಕೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟ ಆದರ್ಶಪುರುಷನೆಂದು ಭಾರತೀಯಸಮಾಜ ಒಪ್ಪಿಕೊಂಡು ಬಂದಿದೆ. ಅವನು ಧರ್ಮಜ್ಞ, ಧರ್ಮದ ರಕ್ಷಕ. ತಾನು ಧರ್ಮಾಧರ್ಮಗಳಿಂದ ಅತೀತನಾಗಿದ್ದರೂ ಲೋಕಮರ್ಯಾದೆಯನ್ನು ಕಾಪಾಡಲು ಧರ್ಮದಂತೆ ನಡೆದ ಧರ್ಮಕೃತ್. ಅವನ ಲೋಕೋಪಕಾರಕವೂ ಸನ್ಮಾರ್ಗದರ್ಶಕವೂ ಆದ ಅನಂತ ಕಲ್ಯಾಣಗುಣಗಳಲ್ಲಿ ಕೆಲವನ್ನು ಮಾತ್ರ ಪುರಾಣಗಳು ಸಹಸ್ರನಾಮ, ಅಷ್ಟೋತ್ತರಶತನಾಮಗಳ ರೂಪದಲ್ಲಿ ಲೋಕಕ್ಕೆ ನೀಡಿವೆ. ಅವನ ಈ ಎಲ್ಲಾ ಗೌಣನಾಮಗಳನ್ನು ಅರ್ಥಾನುಸಂಧಾನಪೂರ್ವಕ ಜಪಿಸುವ ಜಾಪಕರು ಭ್ರಮರಕೀಟನ್ಯಾಯದಂತೆ ಆ ಗುಣಗಳನ್ನೇ ಮೈದುಂಬಿಸಿಕೊಂಡು ದೇವತ್ವಕ್ಕೇರಲಿ ಎಂಬುದೇ ಈ ನಾಮಪಾರಾಯಣಗಳ ಉದ್ದೇಶ.

**ರಾಮಬೀಜಸ್ಥಂ ಜಗದೇತಚ್ಚರಾಚರಮ್**

(ಈ ಜಗತ್ತೆಲ್ಲ ರಾಮ ಎಂಬ ಬೀಜಮಂತ್ರದಲ್ಲಿ ಅಡಕವಾಗಿದೆ)

**– ರಾಮರಹಸ್ಯೋಪನಿಷತ್ (೫–೬)**

**ನಾರಾಯಣಾಷ್ಟಾಕ್ಷರೇ ಚ ಶಿವಪಂಚಾಕ್ಷರೇ ತಥಾ**
**ಸಾರ್ಥಕಾರ್ಣದ್ವಯಂ ರಾಮೋ ರಮಂತೇ ಯತ್ರ ಯೋಗಿನಃ**

(ನಾರಾಯಣಾಷ್ಟಾಕ್ಷರೀಮಂತ್ರದಿಂದ ರಾ ಎಂಬ ಅಕ್ಷರ ಮತ್ತು ಶಿವಪಂಚಾಕ್ಷರಿಯಿಂದ ಮ ಎಂಬ ಅಕ್ಷರ, ಈ ಎರಡು ಸಾರ್ಥಕವರ್ಣಗಳಿಂದ ಯೋಗಿಗಳಿಗೆ ಆನಂದವನ್ನು ನೀಡುವ ರಾಮ ಎಂಬ ಮಂತ್ರವಾಗಿದೆ. ಈ ಎರಡು ಅಕ್ಷರಗಳಿಲ್ಲದಿದ್ದರೆ ಆ ಮಂತ್ರಗಳು ಅರ್ಥಹೀನವಾಗುತ್ತವೆ. ಆದ್ದರಿಂದ **ರಾಮ** ಎಂಬುದು ನಾರಾಯಣಾಷ್ಟಾಕ್ಷರೀ ಮತ್ತು ಶಿವಪಂಚಾಕ್ಷರೀ ಮಂತ್ರಗಳ ಸಾರವೇ ಆಗಿದೆ.)

**– ರಾಮರಹಸ್ಯೋಪನಿಷತ್ (೫–೩)**

**ನಾಮಧೇಯಂ ಗುರುಶ್ಚಕ್ರೇ ಜಗತ್ಪ್ರಥಮಮಂಗಲಮ್**

(ಆತನ ಅಭಿರಾಮತೆ(ಸೌಂದರ್ಯ)ಯನ್ನು ನೋಡಿ ತಂದೆ ದಶರಥನು ಮಗನಿಗೆ **ರಾಮ** ಎಂಬ ಹೆಸರನ್ನಿಟ್ಟನು. ಇದು ಜಗತ್ತಿಗೆ ಮೊಟ್ಟ ಮೊದಲ ಮಂಗಳಕರ ಹೆಸರು.)

**– ರಘುವಂಶ (೧೦–೬೭)**